**ಪಿಡಬ್ಲ್ಯೂ:1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿಃ 21-06-2022**

<u>ಮುಂದುವರಿದ ಪಾಟೀ ಸವಾಲು</u> : ಪ್ರತಿವಾದಿ ಪರಃ ಶ್ರೀ ಎಸ್ ಕೆ ಎನ್ ವಕೀಲರಿಂದಃ

ನಿಪಿ-14 ವ್ಯಾಜ್ಯದ ಆಸ್ತಿಗೆ ಸಂಬಂಧಪಟ್ಟ ನಕ್ಷೆ ಅಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-14 ರಲ್ಲಿ ತೋರಿಸಿದ ಜಾಗದಲ್ಲಿ ವಾದಿಗೆ ಹಕ್ಕು ಇದೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-13 ನಕ್ಷೆಯಲ್ಲಿ ಕಾಣುವ ದಾವಾ ಎ ಅನುಸೂಚಿ ಆಸ್ತಿಗಳ ಯಾವ ದಿಕ್ಕಿನಲ್ಲಿ ಕುಮ್ಕಿ ಹಕ್ಕು ಇದೆ ಎಂದರೆ ಪಡು ದಿಕ್ಕಿನಲ್ಲಿದೆ. ನಿಟ್ಟೆ ಗ್ರಾಮದ ಸ.ನಂಃ 58, 59, 60, 61 ಸ್ಥಿರಾಸ್ತಿಗಳು ಒಂದಕ್ಕೊಂದು ಲಗತ್ತಾಗಿದೆ ಎಂದರೆ ನನಗೆ ಸ.ನಂಃ 58 ಮಾತ್ರ ಗೊತ್ತಿರುತ್ತದೆ. ತುಂಗು ಮ್ಯೊಲಿಯವರ ಆಸ್ತಿಯಿಂದ ದಾವಾ ಎ ಅನುಸೂಚಿ ಆಸ್ತಿ ಎಷ್ಟು ದೂರದಲ್ಲಿ ಇದೆ ಎಂದರೆ ಅಂದಾಜು 200 ಮೀಟರ್ ದೂರ ಇದೆ. ಅದು ದಾವಾ ಎ ಅನುಸೂಚಿ ಆಸ್ತಿಯ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದರೆ ಹೇಳಲು ಬರುವುದಿಲ್ಲ.

2. ಸಿಸಿ ನಂಃ 508/11 ರ ಪ್ರಕಾರ ಪ್ರತಿವಾದಿಯ ವಿರುದ್ಧ ದಾಖಲಿಸಿದ ಪ್ರಕರಣದಲ್ಲಿ ನಾನು ಸಾಕ್ಷಿದಾರನು ಎಂದರೆ ಸರಿ. ಆ ಪ್ರಕರಣದಲ್ಲಿ ತನಿಖೆಯ ಸಮಯದಲ್ಲಿ ಪ್ರತಿವಾದಿಯರು ಮನೆ ಕಟ್ಟಿ ಕುಳಿತುಕೊಂಡ ಜಾಗದ ಅಳತೆ ಆಗಿದೆ. ತಹಶೀಲ್ದಾರರು ಸ್ಥಳಕ್ಕೆ ಬಂದು ಅಳತೆ ಮಾಡಿಕೊಟ್ಟು ಹೋಗಿರುತ್ತಾರೆ. ಸಾಕ್ಷಿಗೆ ಒಂದು ನಕ್ಷೆಯನ್ನು ತೋರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ವೆಯರ್ ಸ್ಥಳಕ್ಕೆ ಬಂದು ತಯಾರಿಸಿದ ನಕ್ಷೆಯಾಗಿರುತ್ತದೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ 360 ರ ಅಂಶ 0.08 ಎಕರೆ ಜಾಗದಲ್ಲಿ ಪ್ರತಿವಾದಿ

ವಾಸವಿರುವ ಜಾಗ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ವರ್ಗ ಜಾಗದ ಕುಮ್ಕಿ ಜಾಗ, ಅದು ನನ್ನ ಸಾಧನೆ ಎಂದು ನುಡಿಯುತ್ತಾರೆ.

**3.** ಪ್ರತಿವಾದಿಯರು ಮನೆ ಕಟ್ಟಿಕೊಂಡಿರುವ ಜಾಗ ಸ.ನಂಃ **61** ಮತ್ತು **62** ನೇ ಸ್ಥಿರಾಸ್ತಿಗೆ ಹತ್ತಿರದಲ್ಲಿರುವ ಸ.ನಂಃ **360** ರ ಅಂಶದಲ್ಲಿದೆ ಎಂದರೆ ನಮ್ಮ ಜಾಗಕ್ಕೆ ಹತ್ತಿರ ಇದೆ. ಪ್ರತಿವಾದಿಯರು ಮನೆ ಕಟ್ಟಿರುವ ಜಾಗ ಹಾಗೂ ಆಸ್ತಿ ದಾವಾ ಆಸ್ತಿಯಿಂದ **3** ಕಿ ಮೀ ದೂರದಲ್ಲಿದೆ ಎಂದರೆ ಸರಿಯಲ್ಲ, **60** ಮೀಟರ್ ದೂರದಲ್ಲಿದೆ. ಸದರಿ ಸ್ಥಿರಾಸ್ತಿಯು ಯಾವತ್ತೂ ಕೂಡಾ ದಾವಾ ಎ ಅನುಸೂಚಿ ಆಸ್ತಿಯ ಕುಮ್ಕಿ ಮಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**4.** ಸ.ನಂಃ **360** ಸರ್ಕಾರಿ ಜಾಗ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕುಮ್ಕಿ ಜಾಗ, ಸೊಪ್ಪು ತೆಗೆಯಲು ಕೊಟ್ಟಿರುವ ಜಾಗ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಬಿ ಅನುಸೂಚಿ ಆಸ್ತಿಯು ನಮಗೆ ಕುಮ್ಕಿಯಾಗಿ ನೀಡಿರುತ್ತಾರೆ ಎಂಬ ಬಗ್ಗೆ ಕಂದಾಯ ಇಲಾಖೆಯಿಂದ ಯಾವುದೇ ಆದೇಶ ಆಗಿರುವುದಿಲ್ಲ. ಸದರಿ ಜಾಗ ಕುಮ್ಕಿ ಜಾಗ ನಮಗೆ ಮಂಜೂರಾಗಬೇಕೆಂದು ಅರ್ಜಿ ಕೊಟ್ಟಿರುತ್ತೀರಾ ಎಂದರೆ ನಾನು ಕೊಟ್ಟಿರುವುದಿಲ್ಲ, ಪ್ರತಿವಾದಿ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**5.** ಪ್ರತಿವಾದಿಯು ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ತಾವು ಕಟ್ಟಿಸಿದ ಮನೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾದಿಗಾಗಲೀ, ವಾದಿಯ ಪರವಾಗಿ ನನಗಾಗಲೀ ಈ ದಾವಾ ಬಿ ಅನುಸೂಚಿ ಆಸ್ತಿಯಲ್ಲಿ ಯಾವುದೇ ನಿವೃತ್ತಿ ಕೋರಲು, ಯಾವುದೇ ಹಕ್ಕು ಪಡೆಯಲು ಅರ್ಹರಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಿಚಾರಗಳನ್ನು ಪ್ರತಿಪಾದಿಸಿ ಸತ್ಯ ವಿಚಾರಗಳನ್ನು ಮರೆಮಾಚಿ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸರ್ಕಾರವು ಅವಶ್ಯಕ ಪಕ್ಷಗಾರರಾಗಿದ್ದರೂ ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವುದರಿಂದ ಅದು

ವಜಾ ಆಗತಕ್ಕದ್ದು ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿಯಲ್ಲಿ ಪ್ರತಿವಾದಿಯ ಸ್ವಾಧೀನವನ್ನು ಪರಿಗಣಿಸಿ ಪಂಚಾಯತ್‌ನವರು ಡೋರ್ ನಂಬರ್, ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್ ಮತ್ತು ವಿದ್ಯುತ್ತನ್ನು ನೀಡಿರುತ್ತಾರೆ ಎಂದರೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ. ನನಗೆ ಪ್ರತಿವಾದಿಯ ಮನೆಗೆ ಮನೆ ನಂಬರ್ ಕೊಟ್ಟಿರುವುದು ಗೊತ್ತಿರುತ್ತದೆ. ಸ.ನಂಃ **360/1** ಸ್ಥಿರಾಸ್ತಿಯ ಪಶ್ಚಿಮ ದಿಕ್ಕಿನ ಅಂಶ ದಾವಾ ಎ ಅನುಸೂಚಿಯ ಕುಮ್ಕಿ ಮಿತಿಯಲ್ಲಿ ಬರುವುದಿಲ್ಲ ಎಂದರೆ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ ನಿವೇಶನ ರಹಿತರು, ಕೂಲಿ ಕಾರ್ಮಿಕರು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಆಕೆಯ ಸ್ವಂತ ದುಡಿಮೆಯಿಂದ ಮನೆ ಕಟ್ಟಿಕೊಂಡು ಪಂಚಾಯತಿಗೆ ತೆರಿಗೆ ಪಾವತಿಸಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

**6.** ವಿಲ್ಫ್ರೆಡ್ ವಾದಿಯ ಸಹೋದರ. ವಿಲ್ಫ್ರೆಡ್ ಎನ್ನುವವರು ಇದೇ ನ್ಯಾಯಾಲಯದಲ್ಲಿ ರತ್ನಾಕರ ಸುವರ್ಣ ರವರ ವಿರುದ್ಧ ಸ.ನಂಃ **360/1** ಕುಮ್ಕಿ ಹಕ್ಕಿನ ಆಸ್ತಿ ಎಂಬುದಾಗಿ ದಾವೆ ಸಲ್ಲಿಸಿ ಅದು ವಜಾ ಆಗಿರುವ ವಿಚಾರ ಗೊತ್ತಿದೆ ಎಂದರೆ ದಾವೆ ವಜಾ ಆಗಿದೆ, ಆದರೆ ಕುಮ್ಕಿ ಹಕ್ಕಿನ ಬಗ್ಗೆ ಅಲ್ಲ. ನಿಪಿ-**11** ರ ಪ್ರಕಾರ ತೀರ್ಪಾದ ಕ್ರಿಮಿನಲ್ ಪ್ರಕರಣ ನಾನು ಮತ್ತು ವಿಲ್ಫ್ರೆಡ್ ರವರ ಚಿತಾವಣೆಯ ಮೇರೆಗೆ ದಾಖಲಿಸಿದ ಸುಳ್ಳು ಕೇಸು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಿಮಿನಲ್ ಕೇಸು ಖುಲಾಸೆ ಆಗಿರುವ ವಿಚಾರ ನನಗೆ ಗೊತ್ತು. ಆ ಕಾರಣದಿಂದ ಈ ಸುಳ್ಳು ದಾವೆ ಸಲ್ಲಿಸಿ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಬಿ ಅನುಸೂಚಿಯಲ್ಲಿ ವಾದಿಗೆ ಯಾವುದೇ ಹಕ್ಕು, ಪೂರ್ವ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ವಾದಪತ್ರ, ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ-**11** ದಾಖಲೆಯಲ್ಲಿ ದಾವಾ ಬಿ ಅನುಸೂಚಿ ಆಸ್ತಿ ನಮ್ಮ ಕುಮ್ಕಿ ಹಕ್ಕಿನಲ್ಲಿ ಬರುವುದಿಲ್ಲ ಎಂದು ನ್ಯಾಯಾಲಯದ ತೀರ್ಪಿನಲ್ಲಿ ಆಗಿದೆ ಎಂದರೆ ನನಗೆ ನೆನಪಿರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ